ನಾನು ಅವರಿಗೆ ಹೇಳಿದ್ದೇನೆ. ಈಗಿನ ಕೆ ಎಸ್ ಆ ರ್ ಟಿ ಸಿ ಕಾನೂನು ವ್ಯಾಪ್ತಿಯಲ್ಲಿ ನೇಮಕಾತಿ ಮಾಡುವಾಗ ಇವರಿಗೆ ಆದ್ಯತೆ ಕೊಡಲು ಅವಕಾಶ ಇಲ್ಲ. ಅದಿರಬೇಕಾಗಿತ್ತು. ಮುಂದೆ ನೇಮಕಾತಿ ಮಾಡುವಾಗ ಕಾನೂನು ಬದಲಾವಣೆ ಮಾಡುವುದಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಕಾನೂನು ಬದಲಾವಣೆ ತರುತ್ತೇವೆ. ಇವರಿಗೇ ಪ್ರಿಫರೆನ್ಸ್ ಕೊಡಬೇಕೆಂಬುದು ನಮ್ಮ ಅಭಿಪ್ರಾಯ. ಎರಡನೆಯದಾಗಿ ಈಗಿನವರನ್ನು ತೆಗೆದು ಹಾಕಬೇಕು ಅನ್ನುವ ಆಸೆ ನನಗಿಲ್ಲ. ಇವರದು ಕೇಂದ್ರ ಸರ್ಕಾರ ಕೊಡುವ ಸ್ಟೈಪೆಂಡರಿ ಸ್ಕೀಂ, ನಮ್ಮ ಸರ್ಕಾರದ ಎಂಪ್ಲಾಯ್ಮೆಂಟ್ ಅಂಡ್ ಟ್ರೈನಿಂಗ್ ಇಲಾಖೆ ಸ್ಟೈಪೆಂಡ್ ಕೊಡುವ ಮೂಲಕ ಇವರನ್ನು ನಡೆಸುತ್ತಿದ್ದೇವೆ ಈ ಮೂಲಕ ಕೆಲಸ ಕಲಿತುಕೊಳ್ಳುವುದಕ್ಕೆ ಒಂದು ಬಗೆಯ ತರಬೇತಿ ಕೊಟ್ಟಿದ್ದೇವೆಯೇ ಹೊರತು ಕೆಲಸ ಕೊಡುತ್ತೇವೆ ಎಂಬುದು ಎಲ್ಲೂ ಭರವಸೆ ಕೊಟ್ಟಿಲ್ಲ. ಆದರೂ ತಾವು ಇವತ್ತು ಹೇಳುವ ವಿಚಾರ ಸರಿಯಿದೆ. ಪ್ರಾಮಾಣಿಕವಾಗಿ ಇವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಉಡುಪಿಯ ಆರಾಧನಾ ಸಮಿತಿ ಬಗ್ಗೆ

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಅಧ್ಯಕ್ಷರೇ, ಎಲ್ಲೆಲ್ಲಿ ಕಾನೂನುಬಾಹಿರ ನೇಮಕಾತಿ ಮಾಡಬೇಕೋ ಅದನ್ನೆಲ್ಲಾ ನಮ್ಮ ಮುಜರಾಯಿ ಸಚಿವರು ಮಾಡುತ್ತಾರೆ. ಆದರೆ ಕಾನೂನಿನ ಪ್ರಕಾರ ನನ್ನ ಕ್ಷೇತ್ರದ ಆರಾಧನಾ ಸಮಿತಿಗೆ ಕಳೆದ ಮೂರು ವರ್ಷಗಳಿಂದ ಕೇಳುತ್ತಿದ್ದೇನೆ ಇವತ್ತಿನವರೆಗೂ ಆಗಲಿಲ್ಲ. ನಮ್ಮ ಕ್ಷೇತ್ರದ ದೇಗುಲಗಳು ಭಜನಾಮಂದಿರಗಳಿಗೆ ಸಮಾಜ ಮಂದಿರಗಳು ಸರ್ಕಾರದ ಅನುದಾನ ವಿತರಣೆ ಮಾಡುವಲ್ಲಿ ನಮ್ಮ ಜನ ಅವಕಾಶವಂಚಿತರಾಗಿದ್ದಾರೆ. ಜಿಲ್ಲಾ ಪ್ರಗತಿಪರಿಶೀಲನಾಸಭೆಯಲ್ಲಿ ಕೇಳಿಕೊಂಡೆ. ಆಮೇಲೆ ಮುಖ್ಯಮಂತ್ರಿಗಳು ಮಂಗಳೂರಿಗೆ 7 ತಿಂಗಳ ಹಿಂದೆ ಬಂದಿದ್ದಾಗ ಕೇಳಿಕೊಂಡೆ. ಮುಂದಿನ ವಾರ ಮಾಡುತ್ತೇವೆ ಎಂದು ಹೇಳುತ್ತಾ ಹೋದರೆ ವಿನಹ ಇವತ್ತಿನವರೆಗೂ ಆರಾಧನಾ ಸಮಿತಿ ಆಗಲಿಲ್ಲ ನಾನು ಶಾಸಕ ಅಧ್ಯಕ್ಷರು ಎಂದು ಪ್ರಚಾರ ಮಾಡಿದ್ದಾರೆ, ಅಲ್ಲಿ ಜನ ನನ್ನ ಹತ್ತಿರ ಕೇಳುತ್ತಿದ್ದಾರೆ ನಮಗೆ ಅನುದಾನ ಯಾವಾಗ ಕೊಡುತ್ತೀರಿ ಎಂದು ಸರ್ಕಾರ ಏನು ಉತ್ತರ ಕೊಡುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಆರಾಧನಾ ಸಮಿತಿಗೆ ಶಾಸಕರೇ ಅಧ್ಯಕ್ಷರು, ಸಮಿತಿ ಸದಸ್ಯರನ್ನು ನೇಮಕ ಮಾಡಿಲ್ಲ. ಆದ್ದರಿಂದ ಸಭೆ ಸೇರಿ ಹಣ ಕೊಡಲಿಕ್ಕಾಗಲಿಲ್ಲ ಅಂತ. ಇದು ಏತಕ್ಕೋಸ್ಕರ ವಿಳಂಬ ಆಯಿತೋ ನನಗೆ ಗೊತ್ತಿಲ್ಲ. 15 ದಿವಸದಲ್ಲಿ ಆರಾಧನಾ ಸಮಿತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸಭಾಪತಿಗಳೇ, ನೀವೇ ಚೇರ್ಮನ್. ಸಮಿತಿ ಮಾಡಬೇಕಾಗುವುದು ಸರ್ಕಾರದ ಜವಾಬ್ದಾರಿ. ನೀವು ಕಮಿಟಿಯಿಂದ ಪಿಟಿಶನ್ಸ್ ತೆಗೆದುಕೊಳ್ಳಿ ಎಲ್ಲೆಲ್ಲಿ ಮಾಡಬೇಕೋ ಅಲ್ಲಿ ಮಾಡಿ ಕಳುಹಿಸಿ.

ಶ್ರೀ ಎಂ. ಸಿ. ನಾಣಯ್ಯ : ಇಲ್ಲ ಅಧ್ಯಕ್ಷರೇ, ಸಮಿತಿ ಸದಸ್ಯರಾಗಬೇಕು, ಚೇರ್ಮನ್ನೇ ಮಾಡುವುದಕ್ಕೆ ಆಗುವುದಿಲ್ಲ. ನಾಲ್ವರು ಸದಸ್ಯರಿರಬೇಕು. ಖಾಸಗಿ ಸದಸ್ಯರೂ ಇರುತ್ತಾರೆ 15 ದಿವಸದಲ್ಲಿ ಆ ಕೆಲಸ ಮಾಡುತ್ತೇವೆ.